# ನನ್ನ ಬದುಕಿನ ಆನಂದ




## ಚೆಸ್ ದಿಗ್ಗಜನ ಜೊತೆ ಕನ್ನಡಿಗ ಸ್ಟ್ಯಾನಿ

**ಮಹಾಬಲಿಪುರಂನಲ್ಲಿ ಇತ್ತೀಚೆಗೆ ನಡೆದ 44ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ 'ಬಿ' ತಂಡಕ್ಕೆ ಗ್ರ್ಯಾಂಡ್‌ಮಾಸ್ಟರ್ ಕರ್ನಾಟಕದ ಜಿ.ಎ. ಸ್ಟ್ಯಾನಿ 'ಸೆಕೆಂಡ್' ಆಗಿ ಪಾಲ್ಗೊಂಡಿದ್ದರು. ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರನ್ನು ಬಹಳಷ್ಟು ಹತ್ತಿರದಿಂದ ಕಾಣಲು ಒಲಿಂಪಿಯಾಡ್ ಅವಕಾಶ ಕಲ್ಪಿಸಿತು. ತಮ್ಮ ಬಹುವರ್ಷಗಳ ಕನಸು ನನಸಾದ ಬಗೆಯನ್ನು ಸ್ಟ್ಯಾನಿ ಅವರು 'ಸುಧಾ' ಓದುಗರಿಗಾಗಿ ಹಂಚಿಕೊಂಡಿದ್ದಾರೆ.**

■ ನಿರೂಪಣೆ: **ಪ್ರಮೋದ**

ಸುಮಾರು 15 ವರ್ಷಗಳ ಹಿಂದಿನ ಮಾತಿದು. ಚೆನ್ನೈನಲ್ಲಿ ನಡೆದ 'ವಿಶ್ವ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್'ನಲ್ಲಿ ವಿಶ್ವನಾಥನ್ ಆನಂದ್ ಅವರು ಅತಿಥಿಯಾಗಿ ಪಾಲ್ಗೊಂಡಿದ್ದರು. ಆಗ ಬಹಳಷ್ಟು ಜನ ಆನಂದ್ ಜೊತೆ ಫೋಟೊ ತೆಗೆಸಿಕೊಳ್ಳಲು, ಹಸ್ತಾಕ್ಷರ ಪಡೆಯಲು ಮುಗಿಬಿದ್ದಿದ್ದರು. ಇದನ್ನು ನೋಡಿದ ನನ್ನ ತಂದೆ ಅಂಥೋಣಿ ಜ್ಞಾನಪ್ರಕಾಶ – 'ಹೋಗು, ನೀನೂ ಫೋಟೊ ತೆಗೆಸಿಕೊ' ಎಂದರು.

'ನಾನು ಯಾರು ಎಂಬುವುದೇ ಆನಂದ್‌ಗೆ ಗೊತ್ತಿಲ್ಲ. ಫೋಟೊ ತೆಗೆಸಿಕೊಂಡು ಏನು ಪ್ರಯೋಜನ? ನಾನು ಯಾರೆಂಬುದು ಗೊತ್ತಾದ ಮೇಲೆ ಅವರೊಂದಿಗೆ ಫೋಟೊ ತೆಗೆಸಿಕೊಳ್ಳುವೆ' ಎಂದು ಅಪ್ಪನಿಗೆ ಹೇಳಿದ್ದೆ. ಆ ಮಾತುಗಳನ್ನು ಕೇಳಿ ನನ್ನ ತಂದೆಗೂ ಅಚ್ಚರಿಯಾಗಿತ್ತು. ಇದನ್ನು ಅಮ್ಮ ಲಿಜಿ ಅಂಥೋಣಿ ಮುಂದೆಯೂ ಹೇಳಿದ್ದರು.

ಇತ್ತೀಚೆಗೆ ಮಹಾಬಲಿಪುರಂನಲ್ಲಿ ನಡೆದ 44ನೇ ಚೆಸ್ ಒಲಿಂಪಿಯಾಡ್‌ನ ಮೊದಲ ದಿನ ಭಾರತ ತಂಡದ ಸಿಬ್ಬಂದಿಗೆ ಭೋಜನಕೂಟ ಏರ್ಪಡಿಸಲಾಗಿತ್ತು. ಆಗ ಆನಂದ್ ಅವರೊಂದಿಗೆ ಎಲ್ಲರೂ ಫೋಟೊ ತೆಗೆಸಿಕೊಳ್ಳುತ್ತಿದ್ದರು. ಆಗ ಅವರ ಬಳಿ ತೆರಳಿ, ನನ್ನ ಪರಿಚಯ ಹೇಳಿಕೊಂಡೆ. 'ನಿನ್ನ ಬಗ್ಗೆ, ನಿನ್ನ ಬದುಕಿನ ಪಯಣದ ಬಗ್ಗೆ ನನಗೆ ಗೊತ್ತಿದೆ' ಎಂದರು. ನನ್ನ ಪರಿಚಯ ಮೊದಲೇ ಇದೆ ಎನ್ನುವ ರೀತಿಯಲ್ಲಿ ಆಪ್ತವಾಗಿ ಮಾತನಾಡಿದರು. ಅವರ ಮಾತುಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನನ್ನ ಕೋಚ್ ಚೆನ್ನೈನ ಸರವಣನ್ ಅವರು ಆನಂದ್ ಅವರಿಗೆ ಆತ್ಮೀಯರು. ಅವರು ನನ್ನ ಬಗ್ಗೆ ಎಲ್ಲವನ್ನೂ ಹೇಳಿದ್ದರು.

ಆನಂದ್ ಅವರು ತಮ್ಮ 'ವೆಸ್ಟ್ ಬ್ರಿಡ್ಜ್ ಚೆಸ್ ಅಕಾಡೆಮಿ'ಯಲ್ಲಿ 18 ವರ್ಷದ ಒಳಗಿನ ಪ್ರತಿಭಾನ್ವಿತ ಮಕ್ಕಳಿಗೆ ತರಬೇತಿ ನೀಡುತ್ತಿದ್ದಾರೆ. ಅಲ್ಲಿ ತರಬೇತಿ ಪಡೆದ ಆಟಗಾರರು ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ 'ಬಿ' ತಂಡದಲ್ಲಿದ್ದರು. ಆ ತಂಡಕ್ಕೆ ವಿಶೇಷ ಒತ್ತು ಕೊಟ್ಟು ಸಲಹೆಗಳನ್ನು ನೀಡುತ್ತಿದ್ದರು.

ಆಟದ ನಡೆ, ಕೌಶಲ, ಎದುರಾಳಿ ಸವಾಲಿಗೆ ಯಾವ ರೀತಿ ಪ್ರತಿರೋಧ ಒಡ್ಡಿದರೆ ಗೆಲ್ಲುತ್ತೇವೆ ಎನ್ನುವುದನ್ನು ಹೇಳಿಕೊಟ್ಟಿದ್ದರು. ತಮ್ಮ ವೃತ್ತಿ ಜೀವನದ ಅನುಭವ ನಮ್ಮ ತಂಡದ ಆಟಗಾರರ ಜೊತೆ ಹಂಚಿಕೊಂಡಿದ್ದರು.

ನಮ್ಮ ತಂಡ ಅಮೆರಿಕದ ಎದುರು ಮಹತ್ವದ ಪಂದ್ಯವಾಡುತ್ತಿತ್ತು. ಅಮೆರಿಕ ವಿಶ್ವ ರ‍್ಯಾಂಕಿಂಗ್ ಹಾಗೂ ರೇಟಿಂಗ್‌ನಲ್ಲಿ ಮುನ್ನಡೆಯಲ್ಲಿದೆ. ಅವರ ತಂಡದಲ್ಲಿದ್ದ ನಾಲ್ವರು ಆಟಗಾರರು ವಿಶ್ವ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರ 20ರ ಒಳಗೆ ಸ್ಥಾನ ಹೊಂದಿದ್ದಾರೆ. ನಮ್ಮ ತಂಡದಲ್ಲಿದ್ದವರ ರ‍್ಯಾಂಕಿಂಗ್ 75ರಿಂದ 100ರ ಒಳಗೆ ಇದೆ. ಆದರೂ, ಆನಂದ್ ಅವರ ಪ್ರೇರಣಾದಾಯಕ ಮಾತುಗಳಿಂದ ಅಮೆರಿಕ ಎದುರು ಗೆಲುವು ಸಾಧಿಸಿದೆವು. ಅಮೆರಿಕದ ಬಲಿಷ್ಠ ಆಟಗಾರರ ಎದುರು ಆಡಿದ ಅನುಭವ ಹೊಂದಿದ್ದ ಆನಂದ್ ಅವರು, ಯಾರ ವಿರುದ್ಧ ಹೇಗೆ ಆಡಬೇಕು ಎನ್ನುವುದನ್ನು ಹೇಳಿಕೊಟ್ಟಿದ್ದರು.

ಈ ಸಲದ ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕ ಗೆದ್ದ ಉಜ್‌ಬೇಕಿಸ್ತಾನ ವಿರುದ್ಧದ 10ನೇ ಸುತ್ತಿನ ಪಂದ್ಯದಲ್ಲಿ ಭಾರತದ ಆಟಗಾರ ಸೋಲು ಕಂಡಿದ್ದ. ಆಗ ಆನಂದ್ ಅವರು ಮಧ್ಯರಾತ್ರಿ ಆಟಗಾರರ ಕೊಠಡಿಗೆ ಬಂದು ಮುಂದಿನ ಸುತ್ತಿನಲ್ಲಿ ಚೆನ್ನಾಗಿ ಆಡುವಂತೆ ಪ್ರೇರಣೆ ತುಂಬಿದ್ದರು. ಸ್ವಲ್ಪದರಲ್ಲಿಯೇ ಚಿನ್ನ ಗೆಲ್ಲುವ ಅವಕಾಶ ಕಳೆದುಕೊಂಡರೂ ಕಂಚಿನ ಪದಕ ಜಯಿಸಿದೆವು ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಒಲಿಂಪಿಯಾಡ್ ಟೂರ್ನಿ ಮುಗಿಯುವ ತನಕ ಹಲವು ಬಾರಿ ಆನಂದ್ ಅವರನ್ನು ಬಹಳಷ್ಟು ಹತ್ತಿರದಿಂದ ಕಂಡಿದ್ದೇನೆ. ಅವರ ಒಡನಾಟದಲ್ಲಿ ಅನೇಕ ವಿಷಯ ತಿಳಿದುಕೊಂಡಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಬಗ್ಗೆ ಅವರಿಗೆ ಗೊತ್ತಿದೆ. ಶಿವಮೊಗ್ಗದಂಥ ಊರಿನಿಂದ ಬಂದ ನನಗೆ ವಿಶ್ವ ಚಾಂಪಿಯನ್ ಬದುಕನ್ನು ಹತ್ತಿರದಿಂದ ನೋಡಲು ಸಾಧ್ಯವಾಗಿದೆ.

ಆನಂದ್ ಅವರನ್ನು ಹತ್ತಿರದಿಂದ ನೋಡಿ, ಸಲಹೆಗಳನ್ನು ಪಡೆದು ಫೋಟೊ ತೆಗೆಯಿಸಿಕೊಂಡಾಗ 15 ವರ್ಷಗಳ ಹಿಂದೆ ಅಪ್ಪನ ಮುಂದೆ ಹೇಳಿದ್ದ ಮಾತು ಈಗ ಮತ್ತೆ ನೆನಪಾಗುತ್ತಿದೆ. ನನ್ನ ಈ ಸಂಭ್ರಮವನ್ನು ನೋಡಲು ಅಪ್ಪನೇ ಇಲ್ಲವಲ್ಲ ಎನ್ನುವ ನೋವು ಕೂಡ ಕಾಡುತ್ತಿದೆ. ಇದನ್ನು ಅಮ್ಮನ ಮುಂದೆ ಹೇಳಿಕೊಂಡಾಗ, 'ಅಪ್ಪ ಎಲ್ಲಿಯೇ ಇದ್ದರೂ ನಿನಗೆ ಆಶೀರ್ವಾದ ಮಾಡುತ್ತಾನೆ' ಎನ್ನುವ ಸಮಾಧಾನದ ಮಾತುಗಳನ್ನು ಹೇಳುತ್ತಾರೆ. ಇದಕ್ಕಿಂತ ಬದುಕಿನಲ್ಲಿ ದೊಡ್ಡ ಸಂತೋಷ ಇನ್ನೇನಿದೆ?

ಪ್ರತಿಕ್ರಿಯಿಸಿ: feedback@sudha.co.in